## ಸಮೀಕ್ಷೆಗಳು ಏನು ಹೇಳುತ್ತವೆ?

ಬೆಂಗಳೂರಿನ ನಿಮ್ಹಾನ್ಸ್‌ನ ತಜ್ಞರು ದೇಶದ 12 ರಾಜ್ಯಗಳಲ್ಲಿ ಇತ್ತೀಚೆಗೆ ನಡೆಸಿದ ಸಮೀಕ್ಷೆಯ ವರದಿಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಯಿತು. ಇದರ ಕೆಲವು ಅಂಶಗಳು ಹೀಗಿವೆ.

1. ತೀವ್ರ ಮಾನಸಿಕ ರೋಗಗಳಾದ (ಹಿಂಸಾತ್ಮಕ ಚಟುವಟಿಕೆಗಳ ಸಾಧ್ಯತೆ ಇರುವ) ಸ್ಕಿಜೋಫ್ರೇನಿಯಾದಂತಹವು ಪುರುಷರಲ್ಲಿ ಹೆಚ್ಚಾಗಿದ್ದರೆ ಖಿನ್ನತೆ ಮಹಿಳೆಯರಲ್ಲಿ ಹೆಚ್ಚಾಗಿ ಕಂಡುಬಂದಿದೆ.

2 . ನಶೆಯ ವಸ್ತುಗಳ ಬಳಕೆ ಪುರುಷರಲ್ಲಿ (9%) ಹೆಚ್ಚಾಗಿದ್ದರೆ ಮಹಿಳೆಯರಲ್ಲಿ ಇದು ಬಹಳ ಕಡಿಮೆ (0.5%) ಇರುವುದು ಕಂಡುಬಂದಿದೆ.

ಈ ಸಮೀಕ್ಷೆಯಲ್ಲಿ ಹೊರಬಂದ ಇನ್ನೊಂದು ಕುತೂಹಲಕರ ಅಂಶವೆಂದರೆ– ಪುರುಷರ ನಶೆಯ ವಸ್ತುಗಳ ಬಳಕೆ ಮತ್ತು ಸ್ತ್ರೀಯರ ಖಿನ್ನತೆ 40– 4೯ರ ವಯಸ್ಸಿನವರಲ್ಲಿ ಹೆಚ್ಚಾಗಿ ಕಂಡುಬಂದಿದೆ. ಆತ್ಮಹತ್ಯೆಯೂ ಇದೇ ವಯಸ್ಸಿನ ಜನಗಳಲ್ಲಿ ಹೆಚ್ಚಾಗಿದೆ ಎಂದು ಸಮೀಕ್ಷೆ ತಿಳಿಸಿದೆ.

ಇದಕ್ಕೆ ಸ್ಪಷ್ಟ ಕಾರಣಗಳನ್ನು ಸಮೀಕ್ಷಾ ವರದಿಯಲ್ಲಿ ಹೇಳಿಲ್ಲವಾದರೂ ನನ್ನದೊಂದು ಊಹೆಯನ್ನು ಮಂಡಿಸುತ್ತೇನೆ. 40– 4೯ರ ಮಧ್ಯವಯಸ್ಸು ಯೌವ್ವನದ ಹುಮ್ಮಸ್ಸಿನಿಂದ ಹೊರಬಂದು ನಮ್ಮತನವನ್ನು ಕಂಡುಕೊಳ್ಳುವ ಹಂತವಾಗಿರುತ್ತದೆ. ಆಗ ಸ್ತ್ರೀ– ಪುರುಷರಿಬ್ಬರೂ ಮುಖವಾಡಗಳನ್ನು ಕಳಚಿ ಆತ್ಮೀಯ ಸಂಬಂಧಗಳ ಹುಡುಕಾಟದಲ್ಲಿರುತ್ತಾರೆ. ಇದು ಸಾಧ್ಯವಾಗದಿದ್ದಾಗ ಖಿನ್ನತೆಗೆ ಒಳಗಾಗುವುದು, ಆತ್ಮಹತ್ಯೆಯ ಪ್ರಯತ್ನ ಮಾಡುವುದು ಅಥವಾ ನಶೆಯ ವಸ್ತುಗಳ ಮೊರೆ ಹೋಗುವುದು ಸಹಜವಾಗಿರಬಹುದೇ? ಹೆಚ್ಚಿನ ಸಂಶೋಧನೆಗಳು ಮಾತ್ರ ಇದರ ಬಗೆಗೆ ಬೆಳಕು ಚೆಲ್ಲಬಲ್ಲದು.

ಮುಂದುವರೆಯುತ್ತದೆ. ಆಗ ಸಿಟ್ಟು ಬರುವ ಅಗತ್ಯವೇ ಇಲ್ಲದಿದ್ದಾಗ ಕೂಡ ಕೋಪಿಸುವುದು, ದುಃಖವೇ ಇಲ್ಲದಿದ್ದಾಗ ಕೂಡ ಅಳುವುದು ಮುಂತಾದ ವರ್ತನೆಗಳು ಸುತ್ತಲಿನವರಲ್ಲಿ ಗೊಂದಲ ಮೂಡಿಸಬಹುದು. ಸ್ನೇಹಿತನೊಬ್ಬನ ತಂದೆ ದಿನನಿತ್ಯ ಸಂಜೆ ಮನೆಗೆ ಬಂದ ಕೂಡಲೆ ಕೋಪದಿಂದ ಕೂಗಾಡುತ್ತಿದ್ದರು. ನಾನೊಮ್ಮೆ ಅವರ ಕೋಪಕ್ಕೆ ಉತ್ತರವಾಗಿ 'ಅಂಕಲ್ ಯಾಕೋ ಬಹಳ ಬೇಸರದಲ್ಲಿರುವಂತೆ ಕಾಣುತ್ತಿದೆಯಲ್ಲಾ' ಎಂದು ಹೇಳಿದ್ದೆ. ತಕ್ಷಣ ಅವರು ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡರು. ನಾವು ಕಿಟಕಿಯ ಸಂದಿನಿಂದ ಇಣುಕಿದಾಗ ಅವರು ಮುಖ ಮುಚ್ಚಿಕೊಂಡು ಜೋರಾಗಿ ಬಿಕ್ಕುತ್ತಿದ್ದರು.

### ಏನಿದರ ಪರಿಣಾಮಗಳು?

ಬೇರೆಬೇರೆ ದೇಶಗಳಲ್ಲಿ ನಡೆದ ಸಂಶೋಧನೆಗಳ ಪ್ರಕಾರ ಮಾನಸಿಕ ರೋಗವಾದ ಖಿನ್ನತೆ ಸ್ತ್ರೀಯರಲ್ಲಿ ಕಾಣಿಸುವ ಸಾಧ್ಯತೆಗಳು ಹೆಚ್ಚು. ಆದರೆ ಹಿಂಸಾಚಾರ, ಕೊಲೆ–ಸುಲಿಗೆಗಳಿಂದ ಜೈಲು ಸೇರುವವರಲ್ಲಿ ಮತ್ತು ನಶೆಯ ವಸ್ತುಗಳ ದಾಸರಾಗುವುದರಲ್ಲಿ ಗಂಡಸರದ್ದೇ ಬಹುಮತ. ಅಮೆರಿಕಾದ ಹೆಸರಾಂತ ಮನೋಚಿಕಿತ್ಸಕ ಟೆರೆನ್ಸ್ ರಿಯಲ್ 'ಐ ಡೋಂಟ್ ವಾಂಟ್ ಟು ಟಾಕ್ ಅಬೌಟ್ ಇಟ್' ಎನ್ನುವ ಪುಸ್ತಕದಲ್ಲಿ ತನ್ನ ವೃತ್ತಿಯ ಅನುಭವಗಳ ಮೂಲಕ ಕಂಡುಕೊಂಡ ಕುತೂಹಲಕರ ವಿಚಾರಗಳನ್ನು ಮುಂದಿಡುತ್ತಾನೆ.

ಮಕ್ಕಳ ಭಾವನಾಪ್ರಪಂಚಕ್ಕೆ ಪೋಷಕರು ಎರಡು ರೀತಿಯಲ್ಲಿ ಹಾನಿ ಮಾಡಬಹುದು.

❖ ಮಕ್ಕಳು ಭಾವನೆಗಳನ್ನು ವ್ಯಕ್ತಪಡಿಸುವುದನ್ನು ತಡೆಯುವುದರಿಂದ. ಇಂತಹ ಪೋಷಕರು ತಾವೂ ಕೂಡ ಮಕ್ಕಳೊಡನೆ ಭಾವನಾತ್ಮಕವಾಗಿ ಬೆರೆಯುವುದಿಲ್ಲ. ಪ್ರೀತಿ, ನೋವು, ಸುಖ– ದುಃಖಗಳನ್ನು ಹಂಚಿಕೊಳ್ಳದೆ ಭಾವನೆಗಳ ಬೆಂಗಾಡಿನಲ್ಲಿ ಪೋಷಕರು ಮಕ್ಕಳನ್ನು ಬೆಳೆಸುತ್ತಾರೆ.

❖ ಮಕ್ಕಳ ಮೇಲೆ ಹಿಂಸೆಯನ್ನು ಮಾಡುವುದರಿಂದ. ಶಿಸ್ತು, ತಪ್ಪಿಗಾಗಿ ಶಿಕ್ಷೆ, ಬುದ್ಧಿ ಕಲಿಸುವುದು ಮುಂತಾದ ಹಣೆಪಟ್ಟಿಯಲ್ಲಿ ದೈಹಿಕ ಹಿಂಸೆಯನ್ನು ಮಕ್ಕಳ ಮೇಲೆ ಹೇರಲಾಗುತ್ತದೆ.

ವಾಸ್ತವವಾಗಿ ಪೋಷಕರು ತಮ್ಮ ಬಾಲ್ಯದ ಅನುಭವಗಳಿಂದ ಉಂಟಾದ

